/

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೆಂಪೇಗೌಡನಗರ ಉಪವಿಭಾಗ ಚಿಕ್ಕಪೇಟೆ ವಿಭಾಗ, ಬೆಂಗಳೂರು.

ಸ.ಕಾ.ನಿ.ಅ(ಕೆ.ಗೌ.ನ)/ಪಿ.ಆರ್/ 174 /2022-23

ದಿನಾಂಕ : 7-10-2022.

ದಿನಾಂಕ: 01-10-2022 ರಂದು ಈ ಉಪವಿಭಾಗದ ವಾರ್ಡ್ ಸಂಖ್ಯೆ:174 ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ಉಮಾಶಂಕರ್ | ನೋಡಲ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ) | 9480684418 |
| 2 | ಶ್ರೀ. ಸಿ.ಲಿಂಗರಾಜೇಗೌಡ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:143 ಹೊಸ ಸಂಖ್ಯೆ: 174 | 9480688143 |
| 3 | ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 8217636732 |
| 4 | ಶ್ರೀ.ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9901066586 |
| 5 | ವಿ.ವಿ.ಪುರಂ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | |
| 6 | ಎಂ.ಎಂ.ವಿ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448387878 |
| 7 | ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448508638 |
| 8 | ಪಾರ್ವತಿಪುರ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | |
| 9 | ಎಸ್.ಹೇಮಂತ್‌ಕುಮಾರ್ | ಸಹಾಯಕ ಅಭಿಯಂತರರು ಬೆಸ್ಕಾಂ | 9449870535 |
| 10 | ಪ್ರಹ್ಲಾದ್ | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ | 9845444087 |
| 11 | | | |

ದಿನಾಂಕ 01-10-2022 ರಂದು ನಡೆದ ವಾರ್ಡ್ -174 ರ ಸಮಿತಿ ಸಭೆಯ ನಡಾವಳಿಗಳು:-

ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ರವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಅಧ್ಯಕ್ಷರುಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸ್ವಾಗತಿಸುವ ಮೂಲಕ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಮು.ತಿ.ನೋ

ಮೊದಲು ಬಸವನಗುಡಿ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೋಷನ್‌ನ ಶ್ರೀ.ರಾಜು ರವರು ಮಾತನಾಡಿ ಫೋನಿನ ಮುಖಾಂತರ ಮಾತನಾಡಿ ಕನಕಪುರ ರಸ್ತೆಯ ಮಾಧವರಾವ್ ವೃತ್ತದ ಬಳಿ ಇರುವ ಹಾಪ್‌ಕಾಮ್ಸ್ ಹತ್ತಿರವಿರುವ ಪಾಲಿಕೆಯ ಜಾಗವನ್ನು ಒತ್ತುವರಿ ಮಾಡಿ ಜಾಗಕ್ಕೆ ಅಳವಡಿಸಲಾಗಿದ್ದ ಫೆನ್ಸಿಂಗ್ ಅನ್ನು ಕಿತ್ತು ಹಾಕಿರುವ ಬಗ್ಗೆ ಸಭೆಯ ಗಮನಕ್ಕೆ ತಂದು ಸೂಕ್ತ ಕ್ರಮಕೈಗೊಳ್ಳುವಂತೆ ಕೋರಿದರು. ಈ ವಿಷಯವಾಗಿ ಈಗಾಗಲೇ ಪಕ್ಕದ ಸ್ವತ್ತಿನ ಮಾಲೀಕರಿಗೆ ದಾಖಲೆಗಳನ್ನು ಒದಗಿಸುವಂತೆ ತಿಳಿಸಿ ನೋಟೀಸ್ ಜಾರಿ ಮಾಡಲಾಗಿದ್ದು ಮುಂದೆ ಬಿಬಿಎಂಪಿ ಕಾಯ್ದೆ ಅಡಿಯಲ್ಲಿ ಕ್ರಮವಹಿಸುವುದಾಗಿ ವಾರ್ಡ್ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.

ನಂತರ ರಾಮಯ್ಯಾಂಗರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ ಶ್ರೀ. ಓ.ವಿ. ಜಯಕುಮಾರ್ ರವರು ಮಾತನಾಡಿ ಈ ಕೆಳಗೆ ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಕೋರಿದರು,

1. ವೈಜ್ಞಾನಿಕವಾಗಿ ರಸ್ತೆ ಗುಂಡಿಗಳನ್ನು ಮುಚ್ಚುವುದು.
2. ಕೋಟಕ್ ಮಹೀಂದ್ರ ಬ್ಯಾಂಕ್ ಪಕ್ಕದಲ್ಲಿ ಪಾದಚಾರಿ ಮಾರ್ಗವನ್ನು ಸರಿಪಡಿಸುವುದು.
3. ಒಣಕಸ ಮತ್ತು ಹಸಿಕಸವನ್ನು ವಿಂಗಡಿಸಿ ನೀಡುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.
4. ಪಾರಿವಾಳಗಳಿಗೆ ಆಹಾರ ಧಾನ್ಯಗಳನ್ನು ಹಾಕುತ್ತಿರುವ ಸ್ಥಳವನ್ನು ಅಭಿವೃದ್ಧಿ ಪಡಿಸಿ ಆಟೋ ನಿಲ್ದಾಣ ಮಾಡುವುದು.

ಮಾನ್ಯ ನೋಡಲ್ ಅಧಿಕಾರಿಗಳು ಸದರಿ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಸಹಾಯಕ ಅಭಿಯಂತರರು ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸಭೆಯಲ್ಲಿ ಹಾಜರಿದ್ದ ಮಾವಳ್ಳಿಯ ಕೆಂಪಣ್ಣ ಕ್ರಾಸ್‌ನ ನಿವಾಸಿಯೊಬ್ಬರು ಕೆಂಪಣ್ಣ ಕ್ರಾಸ್ ರಸ್ತೆಗೆ ಹೊಸದಾಗಿ ಕಾಂಕ್ರೀಟ್ ಹಾಕಲು ರಸ್ತೆಯನ್ನು ಅಗೆದು ಹಾಳಾಗಿರುವುದರಿಂದ ರಸ್ತೆಯ ನಿವಾಸಿಗಳಿಗೆ ತುಂಬಾ ತೊಂದರೆಯುಂಟಾಗುತ್ತಿರುವುದಾಗಿ ತಿಳಿಸಿ ಕೂಡಲೇ ಕಾಮಗಾರಿಯನ್ನು ಮುಗಿಸಿಕೊಡಬೇಕೆಂದು ಸಭೆಯಲ್ಲಿ ಕೋರಿದರು. ಈ ವಿಷಯವಾಗಿ ವಾರ್ಡ್‌ನ ಅಭಿಯಂತರರು ಮಾತನಾಡಿ ಮಳೆ ಬರುತ್ತಿರುವುದರಿಂದ ಕಾಮಗಾರಿ ತಡವಾಗಿದ್ದು ಆದಷ್ಟು ಬೇಗ ಕಾಮಗಾರಿಯನ್ನು ಮುಗಿಸುವುದಾಗಿ ಸಭೆಗೆ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಅಪ್ಪುಯ್ಯಣ್ಣ ರಸ್ತೆಯ ಶ್ರೀ. ಶರವಣರವರು ಮಾತನಾಡಿ ಅಪ್ಪುಯ್ಯಣ್ಣ ರಸ್ತೆಯಲ್ಲಿನ ಮ್ಯಾನ್‌ಹೋಲ್‌ಗಳಲ್ಲಿ ತುಂಬಿಕೊಂಡಿದ್ದು ಕೊಳವೆ ನೀರು ರಸ್ತೆಯ ಮೇಲೆಲ್ಲಾ ಹರಿಯುತ್ತಿರುವುದರಿಂದ ಓಡಾಟಕ್ಕೆ ಹಾಗೂ ಸಾರ್ವಜನಿಕ ಆರೋಗ್ಯಕ್ಕೆ ತುಂಬಾ ತೊಂದರೆಯುಂಟಾಗುತ್ತಿರುವುದಾಗಿ ಸಭೆಯ ಗಮನಕ್ಕೆ ತಂದರು, ಈ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿಯ ಅಭಿಯಂತರರಿಗೆ ಮಾನ್ಯ ನೋಡಲ್ ಅಧಿಕಾರಿಗಳು ಸೂಚಿಸಿದರು. ನಂತರ ಮಾತು ಮುಂದುವರಿಸಿದ ಶ್ರೀ.ಶರವಣರವರು ಆರ್.ವಿ. ರಸ್ತೆ ಮಿನರ್ವ ವೃತ್ತ (ಕೆಂಪಯ್ಯ ಸರ್ಕಲ್) ದ ಬಳಿಯಲ್ಲಿನ ಬಸ್ ನಿಲ್ದಾಣವು ಹಾಳಾಗಿದ್ದು ಸದರಿ ಬಸ್ ನಿಲ್ದಾಣವನ್ನು ಸರಿಪಡಿಸುವಂತೆ ಕೋರಿದರು, ಆಗ ಮಾನ್ಯ ನೋಡಲ್ ಅಧಿಕಾರಿಗಳು ಈ ವಿಷಯವಾಗಿ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್‌ನ ಅಧಿಕಾರಿಗಳನ್ನು ಕ್ರಮ ವಹಿಸುವಂತೆ ಕೋರುವುದಾಗಿ ಸಭೆಗೆ ತಿಳಿಸಿದರು.

ನಂತರ ಪಾರ್ವತಿಪುರಂನ ಶ್ರೀ ಮಧುರವರು ಮಾತನಾಡಿ ಪಾರ್ವತಿಪುರಂನ ಗಲ್ಲಿಗಳಲ್ಲಿ ಮ್ಯಾನ್‌ಹೋಲ್‌ಗಳು ರಸ್ತೆಗಳಿಗಿಂದ ಕೆಳಗೆ ಹಾಗೂ ಮೇಲೆ ಇರುವುದರಿಂದ ನೀರು ಹರಿಯಲು ತೊಂದರೆ ಉಂಟಾಗುತ್ತಿದ್ದು ನೀರು ಸಹ

ಸಂಗ್ರಹವಾಗುತ್ತಿರುವುದಾಗಿ ತಿಳಿಸಿದರು. ಈ ವಿಷಯವಾಗಿ ಮಾನ್ಯ ನೋಡಲ್ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯ ಅಭಿಯಂತರರು ಹಾಗೂ ವಾರ್ಡ್‌ನ ಅಭಿಯಂತರರಿಗೆ ಸೂಚಿಸಿದರು. ನಂತರ ಮಾತು ಮುಂದುವರೆಸಿದ ಶ್ರೀ ಮಧುರವರು ಪಾರ್ವತಿಪುರ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿಲ್ಲವೆಂದು ತಿಳಿಸಿದರು. ಆಗ ಮಾನ್ಯ ನೋಡಲ್ ಅಧಿಕಾರಿಗಳು ಬೀದಿ ದೀಪಗಳು ವಿಭಾಗದ ಅಧಿಕಾರಿಗಳನ್ನು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರುವುದಾಗಿ ಸಭೆಗೆ ತಿಳಿಸಿದರು.

ನಂತರ ಸಭೆಯಲ್ಲಿದ್ದ ಶ್ರೀ.ಮಧು ಮತ್ತು ಇತರರು ಬೀದಿ ನಾಯಿಗಳು ಮತ್ತು ಬೀಡಾಡಿ ಹಸುಗಳ ಹಾವಳಿ ಹೆಚ್ಚಾಗಿದ್ದು ತಡೆಹಿಡಿಯಬೇಕೆಂದು ಕೋರಿದರು.ಆಗ ಮಾನ್ಯ ನೋಡಲ್ ಅಧಿಕಾರಿಗಳು ಈ ವಿಷಯವಾಗಿ ಕ್ರಮಕೈಗೊಳ್ಳಲು ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳನ್ನು ಕೋರುವುದಾಗಿ ಸಭೆಗೆ ತಿಳಿಸಿದರು.

ನಂತರ ಸಭೆಗೆ ಬಂದಿದ್ದ ಶ್ರೀ.ಮಣಿ ರವರು ಮಾತನಾಡಿ ಡಯಾಗನಲ್ ರಸ್ತೆಯಲ್ಲಿ ಚರಂಡಿ ಅಭಿವೃದ್ಧಿ ಕಾರ್ಯವು ಪ್ರಗತಿಯಲ್ಲಿದ್ದು ಸಮರ್ಪಕವಾಗಿ ಕಾಮಗಾರಿ ಕೈಗೊಳ್ಳುವಂತೆ ಕೋರಿದರು ಮತ್ತು ಆರ್.ವಿ.ರಸ್ತೆ ಡಯಾಗನಲ್ ರಸ್ತೆ ಮತ್ತು ವಾಣಿ ವಿಲಾಸ ರಸ್ತೆಗಳಲ್ಲಿ ಪಾದಚಾರಿಯ ಮಾರ್ಗಗಳಿಗೆ ಅಳವಡಿಸಿರುವ ಕಾಬಲ್‌ಸ್ಟೋನ್‌ಗಳು ಹಾಳಾಗಿದ್ದು ಇದನ್ನು ಸಹ ಸರಿಪಡಿಸುವಂತೆ ಕೋರಿದರು. ಆಗ ಈ ವಿಷಯಗಳಿಗೆ ಸಂಬಂಧಿಸಿದಂತೆ ರಸ್ತೆ ಮೂಲಭೂತ ಸೌಕರ್ಯ ಮತ್ತು ಯೋಜನೆ ವಿಭಾಗದ ಅಧಿಕಾರಿಗಳನ್ನು ಸೂಕ್ತ ಕ್ರಮಕೈಗೊಂಡು ಸರಿಪಡಿಸುವಂತೆ ಕೋರುವುದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು.

ನಂತರ ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ.ರಾಜು ಮತ್ತು ಶ್ರೀ.ವಿ.ಎಸ್.ಎಸ್.ಮೂರ್ತಿರವರು ಮಾತನಾಡುತ್ತಾ ಈಸ್ಟ್ ಸರ್ಕಲ್ ರಸ್ತೆಯಲ್ಲಿ ಹಳೆಯ ಕೆಟ್ಟ ವಾಹನಗಳನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿರುವುದರಿಂದ ವಾಹನ ಸವಾರರಿಗೆ ತೊಂದರೆಯುಂಟಾಗುತ್ತಿರುವುದಾಗಿ ಮತ್ತು ಕಾಮತ್ ಟೂರಿಸ್ಟ್ ಮುಂಭಾಗದಲ್ಲಿ ನೀರು ಶೇಖರಣೆಯಾಗುವುದನ್ನು ಸರಿಪಡಿಸಬೇಕೆಂದು ಕೋರಿದರು, ಮಾನ್ಯ ನೋಡಲ್ ಅಧಿಕಾರಿಗಳು ಸದರಿ ವಿಷಯಗಳನ್ನು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸುವುದಾಗಿ ಸಭೆಗೆ ತಿಳಿಸಿದರು.

ನಂತರ ಸಭೆಗೆ ಹಾಜರಾಗಿದ್ದ ಆಟೋ ಚಾಲಕರು ವಿಶ್ವೇಶ್ವರಯ್ಯನವರ ಪುತ್ಥಳಿ ಬಳಿ ಇರುವ ಆಟೋ ನಿಲ್ದಾಣವನ್ನು ಪಾರಿವಾಳಗಳ ಪಾರ್ಕ್‌ನ ಬಳಿ ಸ್ಥಳಾಂತರಿಸುವುದಾಗಿ ತಿಳಿದು ಬಂದಿರುತ್ತದೆ. ಸದರಿ ಸ್ಥಳವು ಎರಡೂ ರಸ್ತೆಯ ವಾಹನ ಸಂಚಾರವಿರುವುದರಿಂದ ಪ್ರಯಾಣಿಕರಿಗೆ ತೊಂದರೆಯಾಗುವ ಸಂಭವವಿರುವುದರಿಂದ ಸದರಿ ಆಟೋ ನಿಲ್ದಾಣವನ್ನು ಈಗಿರುವ ಸರ್.ಎಂ.ವಿಶ್ವೇಶ್ವರಯ್ಯನವರ ಪುತ್ಥಳಿ ಬಳಿಯಲ್ಲಿಯೇ ಮುಂದು ವರಿಸಬೇಕೆಂದು ತಿಳಿಸಿ ಮನವಿ ಪತ್ರವನ್ನು ಸಹ ನೀಡಿರುತ್ತಾರೆ. ಈ ಸಂಬಂಧ ಪೋಲಿಸ್ ಸಂಚಾರಿ ವಿಭಾಗದ ಅಧಿಕಾರಿಗಳನ್ನು ಸಂಪರ್ಕಿಸಿ ಮುಂದಿನ ಕ್ರಮಗಳ ಬಗ್ಗೆ ಚರ್ಚಿಸುವುದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು.

ನಂತರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರವರ ವಂದನಾರ್ಪಣೆಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ -174 ವಿ. ವಿ.ಪುರಂ

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 174 ಹಾಗೂ
ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ)